# ಬೇಲಿಯ ಹೂಗಳು ನಾವೆಲ್ಲಾ...

ಕ್ಯಾಕ್ಟಸ್, ಬೇಲಿ ಹೂವುಗಳನ್ನು ಬಳಸಿ ಅತ್ಯಂತ ಸುಂದರ ವಿನ್ಯಾಸ ಮಾಡಿ ಮದುಮಗಳನ್ನು ವಿಭಿನ್ನವಾಗಿ ಅಲಂಕಾರ ಮಾಡುವ ಚಾಕಚಕ್ಯತೆ ಇರುವ ಉಮಾ ಜಯಕುಮಾರ್, ಮದುಮಗಳ ಅಲಂಕಾರದ ಬಗ್ಗೆ 'ಸುಧಾ' ಜತೆ ಮಾತನಾಡಿದ್ದಾರೆ.

◆ ಸಾಂಪ್ರದಾಯಿಕತೆ, ಸರಳತೆ, ಆಧುನಿಕ ಟ್ರೆಂಡ್ ಎಲ್ಲವನ್ನೂ ಬಳಸಿಕೊಂಡು ವಧುವಿನ ಅಲಂಕಾರವನ್ನು ವಿಭಿನ್ನವಾಗಿ ಮಾಡುವ ನೀವು ಸೌಂದರ್ಯ ಲೋಕದಲ್ಲಿ ಹೊಸ ಸಂಚಲನ ಮೂಡಿಸಿದ್ದೀರಿ. ವಧುವಿನ ಅಲಂಕಾರಕ್ಕಾಗಿ ನೀವು ಬಳಸುವ ಹೂವುಗಳು ಯಾವುವು?

ಸಾಮಾನ್ಯವಾಗಿ ಪರಿಮಳ ಸೂಸುವ ಮಲ್ಲಿಗೆ, ಗುಲಾಬಿ, ಸುಗಂಧರಾಜ, ಸೇವಂತಿಗೆ, ಕನಕಾಂಬರ ಬಳಸುತ್ತೇನೆ. ಜೊತೆಗೆ ದುಂಡು ಮಲ್ಲಿಗೆ, ಕೋಲ್ಕತ್ತ ಮೊಗ್ಗು, ಇಕೆಬಾನ ಹೂವುಗಳಿಂದಲೂ ಅಲಂಕಾರ ಮಾಡುತ್ತೇನೆ. ಹೂವುಗಳ ಅಲಭ್ಯತೆ, ದುಬಾರಿ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನೋಡಲು ಸುಂದರವಾಗಿರುವ ಕ್ಯಾಕ್ಟಸ್, ಬೇಲಿ ಹೂವುಗಳಿಂದಲೂ ವಧುವನ್ನು ಅಲಂಕರಿಸಿದರೆ ಹೇಗಿರುತ್ತದೆ ಎಂಬ ನಿಟ್ಟಿನಲ್ಲಿ ಯೋಚನೆ ಮಾಡಿ ಪ್ರಯೋಗ ಮಾಡಿದೆ. ಅದು ಮದುವೆ ಮನೆಗಳಲ್ಲಿ ಎಲ್ಲರಿಗೂ ಇಷ್ಟವಾಯಿತು. ಮೇಲಾಗಿ ವಧು ಕೂಡ ವಿಭಿನ್ನವಾಗಿ ಕಂಗೊಳಿಸುವಂತಾಯಿತು.

◆ ಕ್ಯಾಕ್ಟಸ್ ಹೂವು, ಬೇಲಿ ಹೂವುಗಳು ನೋಡಲು ಆಕರ್ಷಕವಾಗಿದ್ದರೂ ಘಮಲಿನಲ್ಲಿ ಶೂನ್ಯ. ಇಂತಹ ಹೂವುಗಳನ್ನು ಎಲ್ಲಿಂದ ತರುತ್ತೀರಿ?

ಕ್ಯಾಕ್ಟಸ್ ಹೂವುಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ. ನಗರದ ಹೊರವಲಯಗಳಲ್ಲಿ ಕೆಲವರು ಮನೆಗಳಲ್ಲಿ ಅಲಂಕಾರಕ್ಕೆಂದು ಬೆಳೆಯುತ್ತಾರೆ. ಅಗತ್ಯ ಬಿದ್ದಾಗ ಅಲ್ಲಿಗೆ ಹೋಗಿ ತರುತ್ತೇವೆ. ಬೇಲಿ ಬದಿಗಳಲ್ಲಿ, ಸ್ನೇಹಿತೆಯರ ಮನೆಯಂಗಳದಿಂದಲೂ ಸಂಗ್ರಹಿಸಿ ತರುತ್ತೇವೆ.

◆ ಇದು ವಧುವಿಗೆ ಮಾತ್ರವೋ ಅಥವಾ ಸೌಂದರ್ಯ ಅಪೇಕ್ಷಿಸುವ ಎಲ್ಲರಿಗೂ ಮಾಡುತ್ತೀರಾ?

ಸಾಮಾನ್ಯವಾಗಿ ಕಾಲೇಜು ಹುಡುಗಿಯರು ವಿಭಿನ್ನ ಹಾಗೂ ಆಕರ್ಷಕವಾಗಿ ಕಾಣಲು ಬೇಲಿ ಹೂವುಗಳಿಂದ ತುರುಬನ್ನು ಅಲಂಕರಿಸಲು ಬಯಸುತ್ತಾರೆ. ಸಂಜೆಯ ಪಾರ್ಟಿಗಳಲ್ಲಿ ಮುಡಿಗೆ ಒಂದೇ ಒಂದು ಸುತ್ತಿನಲ್ಲಿ ಹೂವುಗಳನ್ನು ಸುತ್ತಿದಾಗ ಮುಡಿ ಚೆಂದ ಕಾಣುತ್ತದೆ. ಪಾರ್ಟಿ ಅಲ್ಲದೆ ಕಾಲೇಜುಗಳಲ್ಲಿ ನಡೆಯುವ ಫ್ಯಾಷನ್ ಶೋ, ಮದುಮಗಳ ಅಲಂಕಾರ, ಫ್ಯಾಷನ್ ಬಯಸುವ ಯುವತಿಯರಿಗೆ ಇಂಥ ಹೂವುಗಳಿಂದ ಅಲಂಕಾರ ಮಾಡುತ್ತೇನೆ.

◆ ಈ ಹೂವುಗಳಲ್ಲಿ ದಂಡೆಯಲ್ಲಿ ಇರುವುದಿಲ್ಲ. ಬಿಡಿಹೂವುಗಳನ್ನು ಸಂಗ್ರಹಿಸಿ ಅದನ್ನು ಒಪ್ಪವಾಗಿ ಪೋಣಿಸಿ ಮಾಡುವ ಅಲಂಕಾರಕ್ಕೆ ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ?

ಸಾಮಾನ್ಯವಾಗಿ ಮಲ್ಲಿಗೆ ದಂಡೆ, ಗುಲಾಬಿ, ಸೇವಂತಿಗೆ, ಸಂಪಿಗೆ ಹೂವುಗಳಿಂದ ಮಾಡುವ ಅಲಂಕಾರಕ್ಕೆ ತಗಲುವ ಸಮಯ ಕೇವಲ 10ರಿಂದ 15 ನಿಮಿಷ. ಬೇಲಿ ಹೂವುಗಳು, ಕ್ಯಾಕ್ಟಸ್ ಹೂವುಗಳ ಅಲಂಕಾರಕ್ಕೆ ಅಂದಾಜು 30 ನಿಮಿಷ ಬೇಕಾಗುತ್ತದೆ. ಇಷ್ಟು ಸಮಯದಲ್ಲಿ ಕೇಶವಿನ್ಯಾಸ, ಹೂವಿನ ಅಲಂಕಾರ, ಮೇಕಪ್ ಎಲ್ಲವೂ ಮುಗಿದಿರುತ್ತದೆ.

◆ ಫ್ಯಾಷನ್‌ಪ್ರಿಯ ಯುವತಿ ಈ ರೀತಿಯ ವಿಭಿನ್ನ ಅಲಂಕಾರಕ್ಕೆ ಎಷ್ಟು ಹಣ ವ್ಯಯ ಮಾಡಬೇಕಾಗುತ್ತದೆ?

ಹೂವಿನ ಅಲಂಕಾರಕ್ಕೆ ಬೇಕಾದ ಹೂವುಗಳನ್ನು ನಾವೇ ಸಂಗ್ರಹಿಸಿ ತರಬೇಕಾಗುತ್ತದೆ. ಇದು ಎಲ್ಲೆಡೆ ಲಭ್ಯವಿರುವುದಿಲ್ಲ. ನಾನೇ ಹುಡುಕಿಕೊಂಡು ಹೋಗಿ ತರಬೇಕು. ಜೊತೆಗೆ ಬೇಕಾದ ಬಣ್ಣದ ಹೂವುಗಳ ಆಯ್ಕೆಯನ್ನೂ ಉಡುಪಿಗೆ ತಕ್ಕಂತೆ ಮಾಡಬೇಕಾಗುತ್ತದೆ. ಉಳಿದಂತೆ ಮಾರುಕಟ್ಟೆಯಲ್ಲಿ ಸಿಗುವ ಹೂವಿನ ಅಂದಿನ ದರದ ಮೇಲೆ ಅಲಂಕಾರದ ವೆಚ್ಚವೂ ನಿಗದಿಯಾಗುತ್ತದೆ.

◆ ಹೂವಿನ ಅಲಂಕಾರಕ್ಕೆ ಸಂಬಂಧಿಸಿ ಇಂದಿನ ಫ್ಯಾಷನ್ ಟ್ರೆಂಡ್ ಏನು?

ಮೊಗ್ಗಿನ ಜಡೆ ಸಾಮಾನ್ಯವಾಗಿ ಎಲ್ಲರೂ ಇಷ್ಟಪಡುತ್ತಾರೆ. ಸಾಂಪ್ರದಾಯಿಕ ಮದುವೆಗಳಲ್ಲಿ ಇದು ಹಿಂದಿನಿಂದಲೂ ಬಂದ ಪರಂಪರೆ ಆದರೂ ಇಂದೂ ಬಹುತೇಕರು ಮದುವೆ ಸಮಾರಂಭಕ್ಕಾಗಿ ಮೊಗ್ಗಿನ ದಂಡೆಯ ಜಡೆಯನ್ನೇ ಬಯಸುತ್ತಾರೆ. ಇತರ ಹೂವುಗಳಲ್ಲಿ ಜಪಾನಿ ಶೈಲಿಯ ಇಕೆಬಾನ ಹೂವುಗಳ ಅಲಂಕಾರದ ಜತೆಗೆ 'ಮೆಸ್ಸಿ ನಾಟ್, ಮೆಸ್ಸಿ ಜಡೆ' ಅಲಂಕಾರವೂ ಇಂದಿನ ಲೇಟೆಸ್ಟ್ ಫ್ಯಾಷನ್ ಟ್ರೆಂಡ್ ಆಗಿದೆ. ಕೆಲವು ಸಲ ಆಕರ್ಷಕವಾದ ಕೃತಕ ಹೂವುಗಳಿಂದಲೂ ಅಲಂಕಾರ ಮಾಡುತ್ತೇವೆ. ಇವುಗಳು ನೈಜ ಹೂವುಗಳಂತೆಯೇ ಕಾಣುತ್ತವೆ. ■



## ಲಿಮ್ಕಾ ದಾಖಲೆ

ಸೌಂದರ್ಯ ಕ್ಷೇತ್ರದಲ್ಲಿ "ವನ್ ಮಿನಿಟ್ ಉಮಾ' ಎಂದೇ ಖ್ಯಾತಿ ಗಳಿಸಿ ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಸೌಂದರ್ಯ ತಜ್ಞೆಯಾಗಿ ಕೆಲಸ ಮಾಡುತ್ತಿದ್ದಾರೆ ಉಮಾ ಜಯಕುಮಾರ್. ಒಂದು ನಿಮಿಷಕ್ಕೂ ಮೊದಲು 60 ರೀತಿಯ ಕೇಶವಿನ್ಯಾಸ ಮಾಡಿ 'ವನ್ ಮಿನಿಟ್ ಉಮಾ' ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲೆ ನಿರ್ಮಿಸಿದವರು.

ಕೇಶವಿನ್ಯಾಸ, ಸೀರೆ ಉಡುವ ವಿನ್ಯಾಸ, ಮೇಕಪ್, ವಧುವಿನ ಅಲಂಕಾರ... ಸೌಂದರ್ಯದ ಹತ್ತು ಹಲವು ವೈವಿಧ್ಯಗಳಲ್ಲಿ ಉಮಾ ಎತ್ತಿದಕೈ. ಸೀರೆಯನ್ನು ಅಚ್ಚುಕಟ್ಟಾಗಿ ಉಡಿಸಲು ಉಮಾ ತೆಗೆದುಕೊಳ್ಳುವ ಸಮಯ ಕೇವಲ ಒಂದು ನಿಮಿಷ.

ಚಿಕ್ಕ ವಯಸ್ಸಿನಲ್ಲೇ ಮೇಕಪ್, ಫ್ಯಾಷನ್‌ಗಳಲ್ಲಿ ಅಪಾರ ಆಸಕ್ತಿ ವಹಿಸಿದ್ದ ಈ ಸೌಂದರ್ಯತಜ್ಞೆ, ಆಕೆಯ ಆಸಕ್ತಿಯಂತೆ ಕಳೆದ 30 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ 'ಕ್ಲಾಸಿಕ್ ಬ್ಯೂಟಿ ಪಾರ್ಲರ್' ತೆರೆದರು. ಕೇಶಶೈಲಿ, ವಿನ್ಯಾಸ, ಮೇಕಪ್, ಸೀರೆ ಉಡಿಸುವ ಶೈಲಿ ಮುಂತಾದ ವಿಷಯಗಳ ಬಗ್ಗೆ ಆಸಕ್ತರಿಗೆ ತರಬೇತಿಯನ್ನೂ ನೀಡುತ್ತಿದ್ದಾರೆ.